ನಿಪ್ಪಳಾಗಿ ತಮ್ಮ ವಾದ್ಯದ ಮೂಲಕ ನುಡಿಸತ್ತಿದ್ದರು. ಹಾಡಿನ ನಾದ ಇದ್ದ ಮಂದಿ ಮೈಯೆಲ್ಲಾ ಕಿವಿಯಾಗಿ ಇವರ ಹಾಡ ಕೇಳಾಕ ಕುತ್ತ ಬಿಟ್ಟಿದ್ದರು. ಮತ್ತ ಹರೆದ ಹುಡುಗರು ತಮ್ಮ ಹುಡಿಗ್ಯಾರ ಕಲ್ಪನೆ ಮಾಡಕೊಂಡ ಮುಗಲ ನೋಡಕೋತ ಹಾಡಿನ ನಾದದ ಒಳಗ ಒಂದಾಗಿದ್ದರು. ಆವತ್ತ ಗೊಡಚಿಗಿ ಪಿಕನಿಕ್ ಬಂದಿದ್ದ ಚಂದರಗಿ ಕ್ರೀಡಾ ಸಾಲಿ ಮಕ್ಕಳು ಇವರ ನಾದಕ್ಕ ಬೆರಗಾಗಿ ತಮಗ ತಿಳಿದ ಡ್ಯಾನ್ಸ್ ಹೊಡದು ಮತ್ತ ತಮ್ಮ ಗುಂಪ ಸೇರಿಕೊಂಡಿದ್ದರು.

ಧಣೇರ ಬೀಗರು ಗೋಕಾಕದಿಂದ ಬರುವವರಿದ್ದರು; ಅವರಿನ್ನೂ ಬಂದಿರಲಿಲ್ಲ, ಕನ್ಯಾನೂ ಬಂದಿರಲಿಲ್ಲ. ಹತ್ತಾದರೂ ಬರಲಾರದಕ್ಕ ಧಣೇರಿಗೆ ಆತಂಕ ಶುರುವಾಗಿತ್ತು, ಫೋನ್ ಮಾಡಿ ಕೇಳಬೇಕಂದ್ರ ಈಗಿನಾಂಗ ಆವಾಗ ಎಲ್ಲರ ಕೈಯಾಗೂ ಮೊಬೈಲ್ ಇರಲಿಲ್ಲ. ಈಗ ಬಂದಾರ ಬಿಡು ಅಂದ್ರ ಹನ್ನೊಂದ ಹೊಡದರೂ ಅವರ ಸುಳಿವ ಇಲ್ಲಾ. ಭಡಜಿ ಹಗಲೆಲ್ಲಾ ಕೇಳಾವ, ಕನ್ಯಾ ಬಂದಾಳೇನು, ಬೀಗರು ಬಂದರೇನು ಎಂದು. ಬರಾಕ ಹತ್ಯಾರಿ, ಬರಾಕ ಹತ್ಯಾರಿ ಅಂತಾ ಸಮಾಧಾನ ಹೇಳಿ ಭಡಜಿಯ ಆತಂಕ ಕಡಿಮೆ ಮಾಡುವರು. ಆದ್ರ, ಭಡಜಿಗಿಂತ ಧಣೇರ ಆತಂಕ ಜಾಸ್ತಿ ಆಗಿತ್ತು. ಇವರಿಗಿಂತ ಇನ್ನಾ ಲಗ್ನ ಆಗು ಧಣೇರ ಮಗಗ ಇನ್ನೂ ಆತಂಕ ಶುರುವಾಗಿತ್ತು, ಯಾವಾಗ ತನ್ನ ಕನಸಿನ ಚೆಲುವಿ ಬಂದಾಳು, ಯಾವಾಗ ಅವಳ ಮುಖಾ ನೋಡೆನ ಅಂಬೋ ಕನಸಿನ್ಯಾಗ ವರ ಏಕಾಗಿ ಹೋಗಿದ್ದ. ಧಣೇರು ಮಂಟಪದ ಹೊರಗ ಬಂದು ಯಾವದರ ಗಾಡಿ ಬಂದರ ತಮ್ಮವು ಬಂದವು ಏನು ಅಂತಾ ನೋಡುವವರು, ಆದ್ರ ಅವರ ಸುಳಿವ ಇರಲಿಲ್ಲ.

ಕೆಲ ಹುಡುಗರು ಪಟಪಟಿ ತುಗೊಂಡ ಚಂದರಗಿ ತನಾ ಹೋಗಿದ್ದರು, ದೌಡ ಬೀಗರನ್ನು ಕರೆದುಕೊಂಡ ಬರಬೇಕಂತ, ಧಣ್ಯಾರ ಚಡಪಡಿಕಿ ನಿಲ್ಲಲಿಲ್ಲ, ಅಷ್ಟೊತ್ತರೊಳಗ ಗುಡಿ ಮ್ಯಾನೇಜರ್ ಓಡಿ ಬಂದು ಧಣೇರ ನಿಮಗ ಫೋನ್ ಬಂದೈತಿ ಬರ್ರೀ, ನಿಮ್ಮ ಬೀಗರ ಕಡಿಯಾವರು ಫೋನ್ ಮ್ಯಾಡಾರ ಅಂದ್ರು, ಸ್ವಾಗತ ಕೋಣೆಯೊಳಗ ಇದ್ದ ಲ್ಯಾಂಡ್ ಲೈನಿಗಿ ಬೀಗರ ಫೋನ್ ಬಂದಿತ್ತು. ಲಗುಬಗಿನ ಹೋಗಿ ಧಣೇರು ಫೋನ್ ಎತ್ತಿದರು. ಆ ಕಡೆಯಿಂದ ಬೀಗರನ್ನು ಕರಿಯಾಕ ಹ್ವಾದ ಧಣೇರ ಅಣ್ಣನ ಮಗಾ ಫೋನ್ ಮಾಡಿದ್ದ, 'ಕಾಕಾ, ಈಗ ಇಲ್ಲಿ ಯರಗಟ್ಟಿಗಿ ಬಂದ ತಾಸ ಆಯ್ತು, ಪೊಲೀಸರು ನಮ್ಮ ಐದು ಲಾರಿ ಹಿಡದಾರ ಏನ ಹೇಳಿದರೂ ಬಿಡವಲ್ಲಾಗ್ಯಾರ, ನೀ ಅಟ ಇಲ್ಲಿ ಪೊಲೀಸ್ ಸ್ಟೇಷನ್ನಿಗಿ ಫೋನ್ ಮಾಡಿ ಹೇಳು. ಎಲ್ಲಾ ಡ್ರೈವರನ್ನು ಸ್ಟೇಷನ್ನಿಗೆ ಕರಕೊಂಡ ಹೋಗ್ಯಾರ. ಅದನ ಇದನ ಕೇಳಾಕ ಹತ್ಯಾರ. ಮೊದಲ ಚುನಾವಣಿ ಐತಿ, ಮಂದೀನ ಕರಕೊಂಡ ಎಲ್ಲಿ ಹೊಂಟಿರಿ ಅಂತಾ ದಭಾಸಾಕ ಹತ್ಯಾರ. ನೀ ದೌಡ ಫೋನ್ ಮಾಡು' ಅಂತಾ ಇಟ್ಟಾ.

ಧಣೇರ ಎದೆಯಲ್ಲಿ ಸಿಟ್ಟಿನ ಬೆಂಕಿ ಹೊತ್ತಕೊಂಡಿತು. ಬಾಯಿಗೆ ಬಂದ ಬೈಗುಳ ಪದಗಳನ್ನೆಲ್ಲ ಪೊಲೀಸರ ಮೇಲೆ ಪ್ರಯೋಗಿಸಿ, ಯಾರಿಗೆ ಹೇಳಿ ಬಿಡಸಬೇಕಂತ ವಿಚಾರ ಮಾಡಾಕ ಹತ್ತಿದರು. ರಾಜ್ಯದಲ್ಲಿ ಈಗ ಯಾವ ಸರಕಾರವೂ ಇರಲಿಲ್ಲ. ಕೇವಲ ವಾರೊಪ್ಪತ್ತಿನಲ್ಲಿ ವಿಧಾನಸಭೆಗೆ ಚುನಾವಣೆ ನಡೆಯುವದಿತ್ತು. ಹೀಗಾಗಿ, ಸಿ.ಎಂ. ಮೊದಲ ಮಾಡಿ ಮಂತ್ರಿಗಳೆಲ್ಲಾ ಅಧಿಕಾರ ಕಳಕೊಂಡು ಮತ್ತ ಚುನಾವಣೆಗಿ ನಿಂತಿದ್ದರು. ಆವಾಗ ಧಣೇರಿಗೆ ಎಂ.ಪಿ. ಅವರ ನೆನಪಾಯ್ತು, ಎಂ.ಪಿ. ಅವರು ಧಣೇರಿಗೆ ಅಗದಿ ಬೇಕಾಗಿದ್ದವರ ಆಗಿದ್ದರು. ಅದ ಲ್ಯಾಂಡ್ ಫೋನಿಂದ ಫೋನ್ ಹಚ್ಚಿದರು. ಎಂ.ಪಿ. ಅವರ ಪಿ.ಎ. ಯರಗಟ್ಟಿ ಪೊಲೀಸ್ ಸ್ಟೇಷನ್ನಿಗೆ ಫೋನ ಮಾಡಿ ದೊಡ್ಡ ಧಣೇರ ಲಗ್ನದ ಗಾಡಿ ಅದಾವ, ಚುನಾವಣೆ ಗಾಡಿ ಅಲ್ಲಾ, ಮೊದಲ ಬಿಡ್ರಿ ಅಂದಾಗ ಒಂದಿಷ್ಟು ಹೀರಕೊಂಡು ಗಾಡಿ ಬಿಟ್ಟಿದ್ದರು. ಚಂದರಗಿಗಿ ಹೋದ ಪಟಪಟಿ ಮಂದಿ ಬೀಗರ ಲಾರಿಗಳನ್ನು ಮುಂದ ಹಾಕ್ಕೊಂಡು ಲಗ್ನದ ಮಂಟಪಕ ಕರಕೊಂಡ ಬಂದ್ರು. ಧಣೇರಿಗಿ, ಭಡಜಿಗಿ ಅಷ್ಟ ಅಲ್ಲ ಲಗ್ನ ಆಗು ಹುಡಗ ಮೊದಲ ಮಾಡಿ ಅವರ ಫ್ಯಾಮಿಲಿಗೆಲ್ಲಾ ತುಂಬಾ ಖುಷಿಯಾಯಿತು. ಭಡಜಿ ಈಗ ಅವಸರ ಮಾಡತೊಡಗಿದ,